## ಬುತ್ತಿ ಚಿಗುರು

### ಭಾವ ಚೆನ್ನಾಗಿದ್ದರೆ...

ವೇದಿಕೆಯ ಮೇಲೆ ಭಾವಪರವಶನಾಗಿ ಭಾಷಣ ಮಾಡುತ್ತಿದ್ದ ನಂಜುಂಡಯ್ಯನವರು, 'ನಮ್ಮೆಲ್ಲಾ ಕಷ್ಟ–ಕಾರ್ಪಣ್ಯಗಳಿಗೆ ನಮ್ಮ ನಮ್ಮ ಮನಸ್ಸೇ ಕಾರಣ. 'ಯದ್ಭಾವಂ ತದ್ಭವತಿ' ಅಂದರೆ ನಮ್ಮ ಮನಸ್ಸಿನ ಭಾವನೆಗಳು ಹೇಗೆ ಇರುತ್ತವೆಯೋ ಹಾಗೇ ನಮ್ಮ ದಿನಚರಿ ಇರುತ್ತದೆ. ನಮ್ಮ ದಿನಚರಿ ಹೇಗೆ ಇರುತ್ತದೆಯೋ ಅದರ ಸುತ್ತ ಆರೋಗ್ಯ, ಐಶ್ವರ್ಯ, ಸಂಬಂಧಗಳು ಗಿರಕಿ ಹೊಡೆಯುತ್ತ ಇರುತ್ತವೆ. ಹಾಗಾಗಿ ಭಾವ ಚೆನ್ನಾಗಿರಬೇಕು ಏನಂತೀರಿ' ಅಂತ ಸಭಿಕರತ್ತ ಪ್ರಶ್ನಾರ್ಥಕ ಭಾವದ ನೋಟ ಬೀರಿದರು. ಆಗ ತಕ್ಷಣವೇ ಎದ್ದು ನಿಂತ ಸಭಿಕರೊಬ್ಬರು 'ಹೌದು ಸ್ವಾಮಿ. ಭಾವ ಚೆನ್ನಾಗಿದ್ದರೆ ಅಕ್ಕನೂ ಚೆನ್ನಾಗಿ ಇರ್ತಾಳೆ' ಎಂದಾಗ ಸಭಿಕರೆಲ್ಲರೂ ನಗೆಗಡಲಲ್ಲಿ ಮುಳುಗಿದರು.

**ಮಲ್ಲಿಕಾರ್ಜುನ ಸುರಧೇನುಪುರ**



---



### ಇಷ್ಟು ವರ್ಷವಾದರೂ ಅರ್ಥವಾಗಲಿಲ್ಲ

ಸೌಂದರ್ಯ ಸ್ಪರ್ಧೆಯೊಂದರಲ್ಲಿ ವಿಜೇತಳಾಗಿದ್ದ ಮೇನಕಾ ಅವರ ಬಗ್ಗೆ ಪ್ರಕಟವಾಗಿದ್ದ ಸಂದರ್ಶನ ಓದುತ್ತಿದ್ದ ಗೌತಮ, ಅಲ್ಲೇ ಇದ್ದ ಹೆಂಡತಿ ಲಲಿತಾ ಕಡೆ ನೋಡಿ 'ನೋಡೇ. ಈಕೆ ಹೇಳಿದ್ದಾಳೆ ಒಮ್ಮೊಮ್ಮೆ ಸೌಂದರ್ಯವತಿಯರಿಗೆ ಮೂರ್ಖ ಗಂಡ ಸಿಗುತ್ತಾನೆ' ಎಂದ.

ಆಗ ತಕ್ಷಣವೇ ಲಲಿತಾ, ಗಂಡನ ಕಡೆಗೆ ತಿರುಗಿ 'ಬಿಡ್ರೀ ಆಕೆಯೇನು ಹೇಳಬೇಕು. ಇಷ್ಟು ವರ್ಷವಾದರೂ ನೀವು ನನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲವಲ್ಲ. ನಿಮಗೇನು ಹೇಳಬೇಕು ಅಂತಲೇ ತಿಳಿಯುವುದಿಲ್ಲ' ಎಂದಳು.

ಹೆಂಡತಿಯ ಮಾತು ಕೇಳಿದ ಗೌತಮ ಮರು ಮಾತನಾಡದೇ ಸುಮ್ಮನಾದ.

**ಶಂಕರೇಗೌಡ ತುಂಬಕೆರೆ**